# ಗೆಲ್ಲಬೇಕೆಂಬ ಛಲದಿಂದ ಹಾಡಿದೆ

## ಶಿವಾನಿ ಸ್ವಾಮಿ
ಝೀ ಕನ್ನಡ 'ಸರಿಗಮಪ' 21ರ ವಿಜೇತೆ



◆ **ನಿಮ್ಮ ಪರಿಚಯ ಮತ್ತು ಕನಸಿನ ಬಗ್ಗೆ ಏನು ಹೇಳುತ್ತೀರಿ?**

ಬೀದರ್ ನಮ್ಮೂರು. ನಮ್ಮ ಪರಿವಾರ ಸಂಗೀತದಲ್ಲಿಯೇ ತೊಡಗಿದೆ. ಅಪ್ಪ ಶಿವದಾಸ್ ಸ್ವಾಮಿ, ಅಮ್ಮ ಕವಿತಾ ಸ್ವಾಮಿ. ಸಂಗೀತ ಪಾಠ ಮಾಡುತ್ತಾರೆ. ಸಂಗೀತ ಕಾರ್ಯಕ್ರಮಗಳಲ್ಲಿ ಹಾಡುತ್ತಾರೆ. ಅವಳಿ ತಮ್ಮಂದಿರಿದ್ದಾರೆ. ಸಂಗೀತದಲ್ಲಿಯೇ ಎಂಎ, ಪಿಎಚ್‌ಡಿ ಮಾಡಬೇಕು ಎನ್ನುವ ಆಸೆ ಇತ್ತು. ಬೀದರ್‌ನಲ್ಲಿ ಆ ಐಚ್ಛಿಕ ವಿಷಯ ಇಲ್ಲದ ಕಾರಣಕ್ಕೆ ಇತಿಹಾಸ, ಇಂಗ್ಲಿಷ್, ರಾಜ್ಯಶಾಸ್ತ್ರ ಬಿಎಗೆ ಸೇರಿದ್ದೆ. ಮೊದಲ ವರ್ಷ ಬಹುತೇಕ ಮುಗಿದಿದೆ. 'ಸರಿಗಮಪ' ಸ್ಪರ್ಧೆಯಿಂದ ತರಗತಿಗೆ ಹೋಗಲು ಆಗಿಲ್ಲ. ಮೊದಲನೇ ಸೆಮಿಸ್ಟರ್ ಪರೀಕ್ಷೆಯನ್ನು ಬರೆಯಲು ಸಾಧ್ಯ ಆಗಲಿಲ್ಲ. ಮುಂದೆ ಬೆಂಗಳೂರಿನಲ್ಲಿಯೇ ಸಂಗೀತದಲ್ಲಿ ಪದವಿ ಪಡೆದು, ಎಂಎ ಮಾಡುವ ಬಗ್ಗೆ ಯೋಚನೆ ಮಾಡುತ್ತಿದ್ದೇನೆ.

◆ **ಪ್ರತಿ ವಾರದ ಸಿದ್ಧತೆ ಹೇಗಿತ್ತು?**

ವಾರವಿಡೀ ತಾಲೀಮಿನಲ್ಲಿಯೇ ಕಳೆಯುತ್ತಿದ್ದೆ. ವಾರದ ಮೊದಲ ದಿನ ಹಾಡಿನ ಆಯ್ಕೆಯನ್ನು ಮಾಡಿಕೊಳ್ಳಬೇಕಿತ್ತು. ಇಂದು ಮೇಡಂ ನನಗೆ ಮೆಂಟರ್ ಆಗಿದ್ದರು. ನಾವು ಆಯ್ಕೆ ಮಾಡಿಕೊಂಡ ಹಾಡಿಗೆ ಮರುದಿನ ಟೂ ಪೀಸ್ ಬ್ಯಾಂಡ್ ಜೊತೆ ತರಬೇತಿ ನೀಡುತ್ತಿದ್ದರು. ಮರುದಿನ ವಾದ್ಯ ವೃಂದದ ಜೊತೆ ತಾಲೀಮು ಮಾಡಬೇಕಿತ್ತು. ನಂತರ ಚಿತ್ರೀಕರಣ ಮಾಡುತ್ತಿದ್ದರು. ಅದನ್ನೇ ವಾರಾಂತ್ಯದಲ್ಲಿ ಪ್ರಸಾರ ಮಾಡುತ್ತಿದ್ದರು. ಇದು ಪ್ರತಿ ಎಪಿಸೋಡಿನ ಪ್ರಕ್ರಿಯೆ. ನಾನು ಶಿವನ ಪರಮ ಭಕ್ತೆ. ಭಕ್ತಿಯ ಭಾವ ನನ್ನದು. ಕಾಕತಾಳೀಯ ಎಂಬಂತೆ ಸ್ಪರ್ಧೆಯಲ್ಲಿ ಹೆಚ್ಚು ಭಕ್ತಿಗೀತೆಗಳನ್ನೇ ಹಾಡಿದ್ದೇನೆ.

◆ **ಗ್ರಾಫಿಕ್‌ನಿಂದ ಹಾಡುಗಾರಿಕೆಗೆ ನಾಟಕೀಯ ರೂಪ ಬಂತು ಎಂದು ಅನಿಸಿತೆ?**

ಈ ಬಗ್ಗೆ ನನಗೆ ಒಂದೂ ನೆಗೆಟಿವ್ ಪ್ರತಿಕ್ರಿಯೆ ಬಂದಿಲ್ಲ. ಹಾಡುಗಾರಿಕೆಯ ಸನ್ನಿವೇಶವನ್ನು ವೀಕ್ಷಕರ ಮನಸ್ಸಿಗೆ ತಲುಪಿಸುವ ದೃಷ್ಟಿಯಿಂದಲೇ ಕಲಾತ್ಮಕವಾಗಿ ಮಾಡುತ್ತಿದ್ದರು. ಎಲ್ಲ ರೀತಿಯ ವೀಕ್ಷಕರು ಇರುತ್ತಾರೆ. ಶಿವನ ಹಾಡು ಹಾಡುತ್ತೇನೆ. ಅಂದರೆ, ಹಿಂದೆ ಶಿವನ ಮೂರ್ತಿ ಇಡಬಹುದು. ಸ್ಕ್ರೀನ್‌ನಲ್ಲಿ ಶಿವನ ಚಿತ್ರವನ್ನು ತೋರಿಸಬಹುದು. ಅಂದರೆ ನನ್ನ ಹಾಡು ಪರಿಣಾಮಕಾರಿಯಾಗಿ ವೀಕ್ಷಕರಿಗೆ ಮುಟ್ಟಬೇಕು. ಗಾಯನ ಆಲಿಸುವ ಜೊತೆ ಒಂದು ದೃಶ್ಯ ರೂಪವನ್ನೂ ಅವರು ಕಾಣಬೇಕು ಎನ್ನುವುದು ಉದ್ದೇಶ. ಗ್ರಾಫಿಕ್ ಮೂಲಕ ಧ್ವನಿಗೊಂದು ದೃಶ್ಯ ರೂಪವನ್ನು ನೀಡುತ್ತಿದ್ದರು.

◆ **ಸ್ಪರ್ಧೆಗೆ ನೀವು ಆಯ್ಕೆಯಾದ ಪ್ರಕ್ರಿಯೆ ಹೇಗಿತ್ತು?**

ಆಡಿಷನ್ ಬರಲು ವಿಡಿಯೊ ಕಳಿಸಿರುತ್ತೇವೆ. ಆಯ್ಕೆಯಾದವರಿಗೆ ಬೆಂಗಳೂರಿನ ಸ್ಟುಡಿಯೊಗೆ ಕರೆಸಿ ಹಾಡಿಸುತ್ತಾರೆ. ನನ್ನ ಕನಸಿನಲ್ಲಿ 'ಸರಿಗಮಪ' ಸ್ಪರ್ಧೆ ಕೂಡ ಒಂದಾಗಿತ್ತು. ಅದಕ್ಕಾಗಿ ನಿರಂತರ ಪ್ರಯತ್ನ ಮಾಡಿದ್ದೇನೆ. ಆಡಿಷನ್ ಕೊಟ್ಟ ದಿನವನ್ನು ನೆನಪಿಸಿಕೊಂಡರೆ ಈಗಲೂ ಆ ಸನ್ನಿವೇಶ ನನ್ನ ಕಣ್ಣ ಮುಂದೆ ಬರುತ್ತದೆ. ಮೆಗಾ ಆಡಿಷನ್ನಿನ ಸಂದರ್ಭದಲ್ಲಿ ಖುಷಿ ಭಯ ಎರಡೂ ಇತ್ತು. ತೀರ್ಪುಗಾರರ ಅನಿಸಿಕೆ ನನಗೆ ತುಂಬ ಹಿಡಿಸಿತು. ನನ್ನ ಸಹಸ್ಪರ್ಧಿಗಳ ನಿರ್ಣಯಕ್ಕೆ ತೆಗೆದುಕೊಂಡಷ್ಟು ಸಮಯ ನನಗೆ ಹಿಡಿಯಲಿಲ್ಲ. ಕೆಲವೇ ನಿಮಿಷದಲ್ಲಿ ಆಯ್ಕೆ ಆಗಿದ್ದು ಖುಷಿನೋ ಖುಷಿ. ಅದೂ ಮಹಾಕುಂಭ ಮೇಳದ ಕಾಲ. ನನ್ನ ಹಾಡಿಗೆ 'ಶಿವನೇ ಧರೆಗೆ ಇಳಿದಂತೆ ಅನ್ನಿಸುತ್ತೆ' ಎನ್ನುವ ಕಾಂಪ್ಲಿಮೆಂಟ್ ಸಿಕ್ಕಿತ್ತು. ಆಯ್ಕೆಯಾದ ಮೇಲೆ ವೇದಿಕೆಗೆ ನನ್ನ ತಾಯಿ ತಂದೆ ಬಂದರು. ಅವರೇ ನನ್ನ ಸಂಗೀತ ಗುರುಗಳು.

◆ **ನೀವೇ ಗೆಲ್ಲುತ್ತೀರಿ ಎನ್ನುವ ವಿಶ್ವಾಸ ಇತ್ತಾ?**

ನಮ್ಮ ಬಡತನ, ಪೋಷಕರ ಕಷ್ಟವನ್ನು ನೆನಪಿಸಿಕೊಂಡು ಛಲದಿಂದಲೇ ಹಾಡಿದೆ. ನಾನು ಬಂದಿರುವುದೇ ಗೆಲ್ಲಲು ಎಂಬ ಸಂಕಲ್ಪ ನನ್ನ ಮನಸ್ಸಿನಲ್ಲಿ ಇತ್ತು. ಪ್ರತಿ ವಾರ ಒಂದು ಹಾಡು ಕಲಿಯಬೇಕು, ಸಾಹಿತ್ಯವನ್ನು ಕಂಠಪಾಠ ಮಾಡಬೇಕಿತ್ತು. ಅದು ನನ್ನ ಸವಾಲಾಗಿತ್ತು. ಕೆಲವರಿಗೆ ಬೇರೆ ಬೇರೆ ಸಮಸ್ಯೆ ಇದ್ದರೆ ನನಗೆ ಸಾಹಿತ್ಯ ಸ್ಮರಣೆ ಕಷ್ಟ. ಕನ್ನಡ, ತೆಲುಗು, ಹಿಂದಿ, ಬಂಜಾರ, ಮರಾಠಿಯಲ್ಲಿ ಹಾಡುತ್ತೇನೆ. ತತ್ವಪದ, ಭಕ್ತಿಗೀತೆ, ವಚನ, ಚಿತ್ರಗೀತೆ, ಸುಗಮ ಸಂಗೀತ ಹೀಗೆ ಎಲ್ಲ ರೀತಿಯ ಹಾಡುಗಳನ್ನು ಹೇಳುತ್ತೇನೆ. ಹಾಡನ್ನು ನೆನಪಿನಲ್ಲಿ ಇಟ್ಟುಕೊಳ್ಳುವುದು ಕಷ್ಟ ಎಂದು ಅನ್ನಿಸುತ್ತಿತ್ತು. ಆ ಕಷ್ಟವನ್ನು ದಾಟಿ ಗೆಲುವು ನನ್ನದಾಗಿಸಿಕೊಂಡೆ.

◆ **ನಿಮ್ಮ ಅಭಿಮಾನಿಗಳಿಗೆ ಏನು ಹೇಳಲು ಇಷ್ಟಪಡುತ್ತೀರಿ?**

ವೀಕ್ಷಕರ ಅಭಿಪ್ರಾಯಗಳನ್ನು ಕಮೆಂಟ್‌ನಲ್ಲಿ ಓದುತ್ತಿದ್ದೆ. ಈ ಸೀಜನ್‌ನಲ್ಲಿ ಭಕ್ತಿಗೀತೆಗಳನ್ನೇ ಹೆಚ್ಚು ಹಾಡಿದ್ದೇನೆ. ಸಾಕಷ್ಟು ವೀಕ್ಷಕರಲ್ಲಿ ನನಗೆ ಬೇರೆ ಹಾಡು ಗೊತ್ತಿಲ್ಲವೇ ಎನ್ನುವ ಸಂಶಯ ಬಂದಿರಬಹುದು. ನಾನು ಎಲ್ಲ ರೀತಿಯ ಹಾಡುಗಳನ್ನು ಹಾಡಬಲ್ಲೆ. ಹಾಡಿನಲ್ಲಿ ಭೇದ ಭಾವ ಇಲ್ಲ. ಸಮಕಾಲೀನ ಸಂದರ್ಭದಲ್ಲಿ ಒಂದೇ ರೀತಿಯ ಹಾಡುಗಾರಿಕೆ ಸಾಧ್ಯ ಆಗುವುದಿಲ್ಲ. ಸಿನಿಮಾ ಹಾಡುಗಳು ಅದರಲ್ಲಿ ಒಂದು ಭಾಗ. ಜನಪ್ರಿಯ ಹಾಡುಗಳಿಗಿಂತ ಜನಪ್ರಿಯವಲ್ಲದ ಹಾಡುಗಳನ್ನು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಮದುವೆ, ಹುಟ್ಟುಹಬ್ಬದ ಪಾರ್ಟಿಗಳಿಗೂ ಹಾಡುತ್ತೇನೆ. ಎಲ್ಲ ರೀತಿಯ ಕಾರ್ಯಕ್ರಮಗಳಲ್ಲೂ ಹಾಡಿದ್ದೇನೆ.

■ **ರಾಘವೇಂದ್ರ ಕೆ.**